zed by

ದಾರಿದ್ರ್ಯ ದಹನ

ಶಿವ ಸ್ತೋತ್ರಮ್

ಮತ್ತು

ರಾವಣಕೃತ

ಶಿವತಾಂಡವ ಸ್ತೋತ್ರಮ್

ಪ್ರಕಾಶಕರು ಶ್ರೀ ವೈಭವಲಕ್ಷ್ಮೀ ಪ್ರಕಾಶನ

ನಂ.5, ಗ್ರೌಂಡ್ ಫ್ಲೋರ್, ಲಕ್ಷ್ಮೀ ಬಾಲಕೃಷ್ಣ ಸ್ಟ್ರೀಟ್, 2ನೇ ಹಂತ, ಸ್ಟೇಶನ್ ರಸ್ತೆ, ಹುಬ್ಬಳ್ಳಿ ☎:2362581

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ದಾರಿದ್ರ್ಯ ದಹನ
ಶಿವ ಸ್ತೋತ್ರಮ್

ಮತ್ತು

ರಾವಣಕೃತ

ಶಿವತಾಂಡವ ಸ್ತೋತ್ರಮ್

ಶ್ರೀ ವಿದ್ಯಾ ಭಾರತೀ
ಪುಸ್ತಕ ಕೇಂದ್ರ
ಶೃಂಗೇರಿ

ಪ್ರಕಾಶಕರು

ವೈಭವಲಕ್ಷ್ಮೀ ಪ್ರಕಾಶನ

ಭಾರತೀ ಬೀದಿ,

ಎಂ.ಕೆ.ಎಸ್. ಕುಲಕರ್ಣಿ ಬುಕ್ ಡಿಪೋ, ನಂ.5, ಶ್ರೀ ಲಕ್ಷ್ಮೀ-ಬಾಳಕೃಷ್ಣ ಸ್ಕ್ವೇರ್,
ಸ್ಟೇಶನ್ ರೋಡ, ಹುಬ್ಬಳ್ಳಿ-20. ಫೋ.: (0836) 2362581 ಮೊ: 93412-98280

Sri Vidyabharathi Book Centre, Sringeri

CC-O. In Public Domain. Digitized by eGangotri

॥ ದಾರಿದ್ರ್ಯದಹನ ಶಿವ ಸ್ತೋತ್ರಮ್ ॥

ಶ್ರೀ ಗಣೇಶಾಯ ನಮಃ। ವಿಶ್ವೇಶ್ವರಾಯ ನರಕಾರ್ಣವ ತಾರಣಾಯ
ಕರ್ಣಾಮೃತಾಯ ಶಶಿಶೇಖರಧಾರಣಾಯ। ಕರ್ಪೂರ ಕಾಂತಿಧವಲಾಯ
ಜಟಾಧರಾಯ। ದಾರಿದ್ರ್ಯ ದುಃಖದಹನಾಯ ಓಂ ನಮಃ ಶಿವಾಯ ॥೧॥

ವಿಶ್ವಕ್ಕೆ ಈಶ್ವರ, ನರಕಸಮುದ್ರದಿಂದ ಪಾರು ಮಾಡುವವ, ಕಿವಿಗೆ ಅಮೃತನಾದವ, ತಲೆಯಲ್ಲಿ ಚಂದ್ರನನ್ನು ಧರಿಸಿದವ, ಕರ್ಪೂರದ ಕಾಂತಿಯಂತೆ ಬಿಳಿ ಬಣ್ಣದವ, ಜಡೆಯುಳ್ಳವ, ಬಡತನದ ದುಃಖವನ್ನು ಸುಡುವವ ಇಂತಹ ಶಿವನಿಗೆ ನಮಸ್ಕಾರವು.

ಗೌರೀಪ್ರಿಯಾಯ ರಜನೀಶಕಲಾಧರಾಯ ಕಾಲಾಂತಕಾಯ
ಭುಜಗಾಧಿಪ ಕಂಕಣಾಯ। ಗಂಗಾಧರಾಯ ಗಜರಾಜ ವಿಮರ್ದನಾಯ
ದಾರಿದ್ರ್ಯ ದುಃಖದಹನಾಯ ಓಂ ನಮಃ ಶಿವಾಯ ॥೨॥

ಗೌರಿಗೆ ಪ್ರಿಯನು, ಚಂದ್ರಕಲೆ ಧರಿಸಿದವನು, ಕಾಲನಿಗೆ ಯಮನಾದವ, ಮಹಾಶೇಷನನ್ನು ಕಂಕಣವಾಗಿ ಧರಿಸಿದವನು, ಗಂಗೆಯನ್ನು ಧರಿಸಿದವನು,

Sri Vidyabharathi Book Centre, Sringeri

CC-0. In Public Domain. Digitized by eGangotri

ಗಜಾಸುರನನ್ನು ಸಂಹರಿಸಿದವನು ಪಾಪ್ತು ಬಡತನದ ದುಃಖವನ್ನು ನುಡುವವನು ಇಂತಹ ಶಿವನಿಗೆ ನಮಸ್ಕಾರವು.

ಭಕ್ತಿಪ್ರಿಯಾಯ ಭವರೋಗ ಭಯಾಪಹಾಯ ಉಗ್ರಾಯ ದುರ್ಗಭವಸಾಗರ ತಾರಣಾಯ। ಜ್ಯೋತಿರ್ಮಯ ಗುಣನಾಮ ಸುನೃತ್ಯಕಾಯ।
ದಾರಿದ್ರ್ಯ ದುಃಖದಹನಾಯ ಓಂ ನಮಃ ಶಿವಾಯ ॥ ೩ ॥

ಭಕ್ತಿಪ್ರಿಯ, ಸಂಸಾರವೆಂಬ ರೋಗದ ಭಯವನ್ನು ನಾಶಪಡಿಸುವವ, ಉಗ್ರ, ದುರ್ಗಮವಾದ ಸಂಸಾರ ಸಾಗರದಿಂದ ಪಾರು ಮಾಡುವವ, ಜ್ಯೋತಿರ್ಮಯನು, ಗುಣನಾಮ ಒಳ್ಳೆ ನರ್ತನಗಳುಳ್ಳವ ಮತ್ತು ಬಡತನದ ದುಃಖವನ್ನು ನಾಶಮಾಡುವವ ಇಂತಹ ಶಿವನಿಗೆ ನಮಸ್ಕಾರವು.

ಚರ್ಮಾಂಬರಾಯ ಶವಭಸ್ಮ ವಿಲೇಪನಾಯ ಭಾಲೇಕ್ಷಣಾಯ ಮಣಿಕುಂಡಲ ಮಂಡಿತಾಯ। ಮಂಜೀರ ಪಾದಯುಗಲಾಯ ಜಟಾಧರಾಯ।
ದಾರಿದ್ರ್ಯ ದುಃಖದಹನಾಯ ಓಂ ನಮಃ ಶಿವಾಯ ॥ ೪ ॥

ಚರ್ಮಹೊದೆದವ, ಹೆಣದ ಭಸ್ಮವನ್ನು ಲೇಪಿಸಿಕೊಂಡವ, ಹಣೆಗಣ್ಣಿನವ, ರತ್ನಕೆತ್ತಿದ ಕುಂಡಲಗಳಿಂದ ಶೋಭಿಸುವವ, ನೇಪರಗಳುಳ್ಳ ಪಾದದವ,

Sri Vidyabharathi Book Centre, Sringeri

CC-O. In Public Domain. Digitized by eGangotri

ಜಡೆಯುಳ್ಳವ, ಬಡತನದ ದುಃಖವನ್ನು ನಾಶಮಾಡುವವ ಇಂತಹ ಶಿವನಿಗೆ ನಮಸ್ಕಾರವು.

ಪಂಚಾನನಾಯ ಫಣಿರಾಜ ವಿಭೂಷಣಾಯ ಹೇಮಾಂಶುಕಾಯ
ಭುವನತ್ರಯ ಮಂಡಿತಾಯ। ಆನಂದ ಭೂಮಿ ವರದಾಯ ತಮೋಮಯಾಯ।
ದಾರಿದ್ರ್ಯ ದುಃಖದಹನಾಯ ಓಂ ನಮಃ ಶಿವಾಯ ॥ ೫ ॥

ಐದು ಮುಖಗಳುಳ್ಳವ, ಆದಿಶೇಷನ ಆಭರಣವುಳ್ಳವ, ಚಂದ್ರಕಲೆಯನ್ನು ಧರಿಸಿದವ, ಮೂರು ಲೋಕಗಳಿಂದ ಶೋಭೆಗೊಂಡವ, ಕಾಶಿಗೆ ವರವಿತ್ತವ, ತಮೋಗುಣವುಳ್ಳವ, ಬಡತನದ ದುಃಖವನ್ನು ನಾಶ ಮಾಡುವವ ಇಂತಹ ಶಿವನಿಗೆ ನಮಸ್ಕಾರವು.

ಭಾನುಪ್ರಿಯಾಯ ಭವಸಾಗರ ತಾರಣಾಯ ಕಾಲಾಂತಕಾಯ
ಕಮಲಾಸನ ಪೂಜಿತಾಯ ನೇತ್ರತ್ರಯಾಯ ಶುಭಲಕ್ಷಣಲಕ್ಷಿತಾಯ।
ದಾರಿದ್ರ್ಯ ದುಃಖದಹನಾಯ ಓಂ ನಮಃ ಶಿವಾಯ ॥ ೬ ॥

ಸೂರ್ಯನಿಗೆ ಪ್ರಿಯನು, ಭವಸಾಗರವನ್ನು ದಾಟಿಸುವವನು, ಕಾಲನಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಮನಾದವನು, ಬ್ರಹ್ಮನಿಂದ ಪೂಜಿಸಲಡುವವನು, ಮೂರು ಕಣ್ಣುಳ್ಳವನು, ಶುಭ ಲಕ್ಷಣಗಳನ್ನು ಲಕ್ಷಿಸುವವನು ಮತ್ತು ಬಡತನದ ದುಃಖವನ್ನು ಸುಡುವವನು ಆದ ಶಿವನಿಗೆ ನಮಸ್ಕಾರವು.

ರಾಮಪ್ರಿಯಾಯ ರಘುನಾಥ ವರಪ್ರದಾಯ ನಾಗಪ್ರಿಯಾಯ ನರಕಾರ್ಣವ ತಾರಣಾಯ। ಪುಣ್ಯೇಷು ಪುಣ್ಯಭರಿತಾಯ ಸುರಾರ್ಚಿತಾಯ।
ದಾರಿದ್ರ್ಯ ದುಃಖದಹನಾಯ ಓಂ ನಮಃ ಶಿವಾಯ ॥ ೭ ॥

ರಾಮನಿಗೆ ಪ್ರಿಯನು, ರಘುನಾಥನಿಗೆ ವರ ನೀಡಿದವನು, ನಾಗನಿಗೆ ಪ್ರಿಯನು, ನರಕವೆಂಬ ಸಮುದ್ರವನ್ನು ದಾಟಿಸುವವನು, ಪುಣ್ಯಗಳಲ್ಲಿ ಪುಣ್ಯ ತುಂಬಿದವನು, ದೇವತೆಗಳಿಂದ ಪೂಜಿಸಲ್ಪಡುವವನು ಮತ್ತು ಬಡತನದ ದುಃಖವನ್ನು ಸುಡುವವನು ಆದ ಶಿವನಿಗೆ ನಮಸ್ಕಾರವು.

ಮುಕ್ತೇಶ್ವರಾಯ ಫಲದಾಯ ಗಣೇಶ್ವರಾಯ ಗೀತಪ್ರಿಯಾಯ ವೃಷಭೇಶ್ವರ ವಾಹನಾಯ। ಮಾತಂಗ ಚರ್ಮವಸನಾಯ ಮಹೇಶ್ವರಾಯ।
ದಾರಿದ್ರ್ಯ ದುಃಖದಹನಾಯ ಓಂ ನಮಃ ಶಿವಾಯ ॥ ೮ ॥

CC-O. In Public Domain. Digitized by eGangotri

ಮುಕ್ತಿಗೆ ಒಡೆಯನು, ಪಶುವನ್ನು ಕೊಡುವವನು, ಪ್ರಮಥಗಣಂಗಳಿಗೆ ಈಶ್ವರನು, ಗೀತಪ್ರಿಯನು, ನಂದಿಯನ್ನು ವಾಹನ ಮಾಡಿದವನು, ಹುಲಿದೊಗಲು ಹೊದ್ದವನು, ಮಹೇಶ್ವರನು ಮತ್ತು ಬಡತನದ ದುಃಖವನ್ನು ಸುಡುವವನು ಆದ ಶಿವನಿಗೆ ನಮಸ್ಕಾರವು.

ವಸಿಷ್ಠೇನ ಕೃತಂ ಸ್ತೋತ್ರಂ ಸರ್ವರೋಗ ನಿವಾರಣಂ।
ಸರ್ವಸಂಪತ್ಕರಂ ಶೀಘ್ರಂ ಪುತ್ರಪೌತ್ರಾದಿವರ್ಧನಂ।
ತ್ರಿಸಂಧ್ಯಂ ಯಃ ಪಠೇನ್ನಿತ್ಯಂ ಸಹಿ ಸ್ವರ್ಗಮವಾಪ್ನುಯಾತ್ ॥ ೯ ॥

॥ ಇತೀ ಶ್ರೀ ವಸಿಷ್ಠ ವಿರಚಿತಂ ದಾರಿದ್ರ್ಯದಹನ ಶಿವ ಸ್ತೋತ್ರಂ ಸಂಪೂರ್ಣಂ ॥

ವಸಿಷ್ಠರಿಂದ ನಿರ್ಮಿತವಾದ ಈ ಸ್ತೋತ್ರವು ಎಲ್ಲ ರೋಗಗಳನ್ನು ಪರಿಹರಿಸುವುದು. ಬೇಗನೆ ಎಲ್ಲ ಸಂಪತ್ತನ್ನು ಕೊಡುವುದು. ಮಕ್ಕಳು ಮೊಮ್ಮಕ್ಕಳನ್ನು (ಸಂತತಿ) ಬೆಳೆಯಿಸುವುದು ಆಗಿದೆ. ಇದನ್ನು ದಿನಾಲೂ ಮೂರು ಸಂಧಿಕಾಲಗಳಲ್ಲಿ ಪಠಿಸುವವನು ಸ್ವರ್ಗವನ್ನು ಹೊಂದುವನು.

ವಸಿಷ್ಠ ಮಹರ್ಷಿಗಳಿಂದ ರಚಿತವಾದ ದಾರಿದ್ರ್ಯದಹನ ಶಿವಸ್ತೋತ್ರ ಮುಗಿದುದು.

Sri Vidyabharathi Book Centre, Shringeri

॥ ರಾವಣಕೃತ ಶಿವತಾಂಡವ ಸ್ತೋತ್ರಮ್ ॥

CC-O. In Public Domain. Digitized by eGangotri

ಜಟಾಕಟಾಹ ಸಂಭ್ರಮಭ್ರಮನ್ನಿಲಿಂಪನಿರ್ಝರೀ,
ವಿಲೋಲ ವೀಚಿವಲ್ಲರೀ ವಿರಾಜಮಾನ ಮೂರ್ಧನಿ।
ಧಗದ್ಧಗದ್ಧಗಜ್ಜ್ವಲಲ್ಲಲಾಟಪಟ್ಟಪಾವಕೇ
ಕಿಶೋರಚಂದ್ರಶೇಖರೇ ರತಿಃ ಪ್ರತಿಕ್ಷಣಂ ಮಮ ॥ ೧ ॥

ಯಾವನ ಮಸ್ತಕವು ಜಟಾರೂಪ ದಂಡೆಯಲ್ಲಿ ವೇಗದಿಂದ ಚಲಿಸುವ ಗಂಗೆಯ ಚಂಚಲ ತರಂಗ-ಲತೆಗಳಿಂದ ಶೋಭೆಗೊಂಡಿರುವದೋ ಹಣೆಗಣ್ಣು ಧಗಧಗನೆ ಉರಿಯುತ್ತಲಿರುವದೋ, ತಲೆಯಲ್ಲಿ ಬಾಲಚಂದ್ರನು ಕುಳಿತಿರುವನೋ ಅವ (ಭಗವಾನ್ ಶಿವ)ನಲ್ಲಿ ನನಗೆ ನಿರಂತರವಾದ ಪ್ರೀತಿಯುಂಟಾಗಲಿ.

ಧರಾಧರೇಂದ್ರನಂದಿನೀವಿಲಾಸ ಬಂಧುಬಂಧುರಃ।
ಸ್ಫುರದ್ದಿಗಂತ ಸಂತತಿಪ್ರಮೋದ ಮಾನಮಾನಸೇ ॥
ಕೃಪಾಕಟಾಕ್ಷಧೋರಣೀನಿರುದ್ಧ ದುರ್ಧರಾಪದಿ,
ಕ್ವಚಿಚ್ಚಿದಂಬರೇ ಮನೋ ವಿನೋದ ಮೇತು ವಸ್ತುನಿ ॥ ೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಗಿರಿರಾಜನ ಮಗಳಾದ ಪಾರ್ವತಿಯು ವಿಲಾಸಕಾಲದಲ್ಲಿ ಉಪಯೋಗಿಸುವ ಶಿರೋಭೂಷಣದಿಂದ ದಿಕ್ಕುಗಳೆಲ್ಲವೂ ಪ್ರಕಾಶಮಾನವಾದುದನ್ನು ಕಂಡು, ಯಾವನ ಮನಸ್ಸು ಆನಂದಿತವಾಗಿರುವದೋ, ಯಾವನ ನಿರಂತರ ಕೃಪಾದೃಷ್ಟಿಯಿಂದ ಕಠಿಣ ಆಪತ್ತೂ ಕೂಡ ನಿವಾರಣೆಯಾಗುವದೋ ಇಂತಹ ಯಾವುದೋ ದಿಗಂಬರ ತತ್ತ್ವದಲ್ಲಿ ನನ್ನ ಮನಸ್ಸು ವಿನೋದಗೊಳ್ಳಲಿ.

ಜಟಾಭುಜಂಗಪಿಂಗಲಸ್ಫುರತ್ಫಣಾಮಣಿಪ್ರಭಾ,
ಕದಂಬ ಕುಂಕುಮದ್ರವ ಪ್ರಲಿಪ್ತ ದಿಗ್ವಧೂಮುಖೇ।
ಮದಾಂಧಸಿಂಧುರ ಸ್ಫುರತ್ತ್ವಗುತ್ತರೀಯಮೇದುರೇ,
ಮನೋ ವಿನೋದಮದ್ಭುತಂ ಬಿಭರ್ತು ಭೂತಭರ್ತರಿ ॥೩॥

ಯಾವನ ಜಡೆಯಲ್ಲಿ ಹಾವಿನ ಹೆಡೆಯಲ್ಲಿರುವ ಮಣಿಯಿಂದ ಹರಡಿದ ಪಿಂಗಲ ಪ್ರಭೆಯ ಪುಂಜವು ದಿಕ್ಕುಗಳೆಂಬ ಸ್ತ್ರೀಯರ ಮುಖದ ಮೇಲೆ ಕುಂಕುಮ ವರ್ಣದ ಅನುಲೇಪನವನ್ನುಂಟು ಮಾಡುವುದೋ ಅಲ್ಲಾಡುವ ಮದ್ದಾನೆಯ ಚರ್ಮದ ವಸ್ತ್ರವನ್ನು ಹೊದೆದ ಮೂಲಕ ಸ್ನಿಗ್ಧವರ್ಣದವನಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ತೋರುವ ಭೂತನಾಥನಲ್ಲಿ ನನ್ನ ಮನಸ್ಸು ಅದ್ಭುತವಾದ ವಿನೋದಗೈಯಲಿ.

ಸಹಸ್ರಲೋಚನ ಪ್ರಭೃತ್ಯಶೇಷ ಲೇಖಶೇಖರ,
ಪ್ರಸೂನಧೂಲಿ ಧೋರಣೀ ವಿಧೂಸರಾಂಘ್ರಿ ಪೀಠಭೂಃ।
ಭುಜಂಗರಾಜಮಾಲಯಾ ನಿಬದ್ಧ ಜಾಟಜೂಟಕಃ
ಶ್ರಿಯೈ ಚಿರಾಯ ಜಾಯತಾಂ ಚಕೋರ ಬಂಧು ಶೇಖರಃ ॥ ೪ ॥

ಯಾವನ ಚರಣಪಾದುಕೆಗಳು ಇಂದ್ರ ಮೊದಲಾದ ಸಮಸ್ತ ದೇವತೆಗಳು ನಮಿಸುವಾಗ ಅವರ ತಲೆಯೊಳಗಿನ ಕುಸುಮಗಳ ಹುಡಿಯಿಂದ ತುಂಬಿದ್ದವೋ ನಾಗರಾಜನ ಹಾರದಿಂದ ಕಟ್ಟಿದ ಜಡೆಯುಳ್ಳ ಭಗವಾನ್ ಚಂದ್ರಶೇಖರನು ನನ್ನ ಚಿರಸಂಪತ್ತಿಗೆ ಸಾಧಕನಾಗಲಿ.

ಲಲಾಟಚತ್ವರಜ್ವಲದ್ಧನಂಜಯಸ್ಫುಲಿಂಗಭಾ,
ನಿಪೀತ ಪಂಚಸಾಯಕಂ ನಮನ್ನಿಲಿಂಪನಾಯಕಮ್।
ಸುಧಾಮಯೂಖ ಲೇಖಯಾ ವಿರಾಜಮಾನಶೇಖರಂ
ಮಹಾಕಪಾಲಿ ಸಂಪದೇ ಶಿರೋ ಜಟಾಲಮಸ್ತುನಃ ॥ ೫ ॥

Sri Vidyabharati Book Centre, Sringeri

CC-0. In Public Domain. Digitized by eGangotri

ಯಾವನು ಹಣೆಯ ವೇದಿಯ ಮೇಲೆ ಪ್ರಜ್ವಲಗೊಂಡ ಬೆಂಕಿಯ ಕಿಡಿಗಳ ತೇಜದಿಂದ ಪಾಪದೇವತೆಯನ್ನು ಸುಟ್ಟಗೊಳಿಸಿದನೋ, ಇಂದ್ರನು ಯಾವನನ್ನು ನಮಸ್ಕರಿಸುವನೋ, ಚಂದ್ರನ ಕಲೆಯಿಂದ ಸುಶೋಭಿತವಾದ ಮುಕುಟವುಳ್ಳ ಆ (ಮಹಾದೇವನ) ಉನ್ನತವೂ ವಿಶಾಲವೂ ಆದ ಹಣೆಯುಳ್ಳವನ ಜಟಾಲಮಸ್ತಕವು ನಮ್ಮ ಸಂಪತ್ತಿಗೆ ಸಾಧಕವಾಗಲಿ.

ಕರಾಲಭಾಲ ಪಟ್ಟಿಕಾಧಗದ್ಧಗದ್ಧಗಜ್ಜ್ವಲ,
ದ್ಧನಂಜಯಾಧರೀಕೃತ ಪ್ರಚಂಡ ಪಂಚಸಾಯಕೇ।
ಧರಾಧರೇಂದ್ರ ನಂದಿನೀ ಕುಚಾಗ್ರಚಿತ್ತಪತ್ರಕ,
ಪ್ರಕಲ್ಪನೈಕ ಶಿಲ್ಪಿನಿ ತ್ರಿಲೋಚನೆ ಮತಿರ್ಮಮ ॥ ೬ ॥

ಯಾವನು ತನ್ನ ಭಯಂಕರವಾದ ಹಣೆಯ ಮೇಲೆ ಧಗಧಗನೆ ಉರಿಯುವ ಬೆಂಕಿಯಲ್ಲಿ ಪ್ರಚಂಡ ಕಾಮದೇವನನ್ನು ಹವನಗೊಳಿಸಿದನೋ ಗಿರಿರಾಜನ ಕನ್ಯೆಯ ಮೊಲೆಗಳ ಮೇಲೆ ಪತ್ರಭಂಗ ರಚನೆಗೊಳಿಸುವ ಒಬ್ಬನೇ ಒಬ್ಬ ಕಲಾವಂತನೋ ಅಂತಹ ಭಗವಾನ್ ತ್ರಿಲೋಚನನಲ್ಲಿ ನನ್ನ ಧಾರಣೆ ಯುಂಟಾಗಿರಲಿ.

CC-O. In Public Domain. Digitized by eGangotri

ನವೀನಮೇಘಮಂಡಲೀನಿರುದ್ಧ ದುರ್ಧರಸ್ಫುರ
ತ್ಕುಹೂನಿ ಶೀಥಿನೀತಮಃ ಪ್ರಬಂಧ ಬಂಧುಕಂಧರಃ।
ನಿಲಿಂಪನಿರ್ಝರೀ ಧರಸ್ತ ನೋತು ಕೃತ್ತಿಸಿಂಧುರಃ
ಕಲಾನಿಧಾನಬಂಧುರಃ ಶ್ರಿಯಂ ಜಗದ್ಧುರಂಧರಃ ॥ ೭ ॥

ಯಾವಾತನ ಕುತ್ತಿಗೆಯಲ್ಲಿ ಹೊಸ ಮೋಡಗಳ ಸಮೂಹದಿಂದ ತುಂಬಿದ ಅಮಾವಾಸ್ಯೆಯ ಸರಿಹೊತ್ತಿನಲ್ಲಿ ತುಂಬಿಕೊಂಡ ಕಗ್ಗತ್ತಲೆಗೆ ಸಮವಾದ ಕಪ್ಪುಕಲೆಯುಂಟೋ, ಯಾವನು ಗಜಚರ್ಮವನ್ನು ಸುತ್ತಿಕೊಂಡಿರುವನೋ ಅವನು ಸಂಸಾರ ಭಾರವನ್ನು ಧರಿಸುವ ಚಂದ್ರಮನಿಂದ ಮನೋಹರ ಕಾಂತಿಯುಳ್ಳ ಭಗವಾನ್ ಗಂಗಾಧರನು ನನ್ನ ಸಂಪತ್ತನ್ನು ವಿಸ್ತಾರಗೊಳಿಸಲಿ.

ಪ್ರಫುಲ್ಲ ನೀಲಪಂಕಜ ಪ್ರಪಂಚಕಾಲಿಮ ಪ್ರಭಾ,
ವಲಂಬಿಕಂಠ ಕಂದಲೀರುಚಿಪ್ರಬದ್ಧ ಕಂದರಮ್।
ಸ್ಮರಚ್ಛಿದಂ ಮರಚ್ಛಿದಂ ಭವಚ್ಛಿದಂ ಮಖಚ್ಛಿದಂ
ಗಜಚ್ಛಿದಾಂಧಕಚ್ಛಿದಂ ತಮಂತಕಚ್ಛಿದಂ ಭಜೇ ॥ ೮ ॥

Sri Vidyabharati Book Centre, Sringeri

CC-O. In Public Domain. Digitized by eGangotri

ಯಾವಾತನ ಕೊರಳು ಪ್ರದೇಶವು ಅರಳಿನ ನೀಲಕಮಲ ಸಮೂಹದ ಶ್ಯಾಮಪ್ರಭೆಯನ್ನು ಅನುಕರಿಸುವ ಬಗೆಯಲ್ಲಿ ಬಹ್ನಿದಿಂದ ಸುಶೋಭಿತವಾಗಿದೆಯೋ ಅದರಂತೆ ಯಾವನು ಕಾಮದೇವ, ತ್ರಿಪುರ, ಭವ (ಸಂಸಾರ), ದಕ್ಷಯಜ್ಞ, ಗಜಾಸುರ, ಅಂಧಕಾಸುರ ಮತ್ತು ಯಮರಾಜನನ್ನು ನಾಶಗೊಳಿಸಿದನೋ ಅವನನ್ನು ನಾನು ಭಜಿಸುವೆನು.

ಅಗರ್ವ ಸರ್ವಮಂಗಲಾ ಕಲಾ ಕದಂಬ ಮಂಜರೀ,
ರಸಪ್ರವಾಹ ಮಾಧುರೀ ವಿಜೃಂಭಣಾ ಮಧುವ್ರತಮ್ ।
ಸ್ಮರಾಂತಕಂ, ಪುರಾಂತಕಂ, ಭವಾಂತಕಂ, ಮಖಾಂತಕಂ
ಗಜಾಂತಕಾಂಧಕಾಂತಕಂ ತಮಂತಕಾಂತಕಂ ಭಜೇ ॥ ೯ ॥

ಯಾವನು ಅಭಿಮಾನರಹಿತನಾಗಿ ಪಾರ್ವತಿಯ ಕಲಾರೂಪ ಕದಂಬ ಮಂಜರಿಯ ಮಕರಂದರಸದ ಬೆಳೆಯುವ ಮಾಧುರ್ಯವನ್ನು ಕುಡಿಯುವ ಭೃಂಗನೋ ಮತ್ತು ಕಾಮದೇವ, ತ್ರಿಪುರ, ಸಂಸಾರ, ದಕ್ಷಯಜ್ಞ, ಗಜಾಸುರ, ಅಂಧಕಾಸುರ ಮತ್ತು ಯಮರಾಜರನ್ನು ನಾಶಪಡಿಸುವವನನ್ನು ನಾನು ಭಜಿಸುವೆ.

CC-O. In Public Domain. Digitized by eGangotri

ಜಯತ್ವದಭ್ರವಿಭ್ರಮಭ್ರಮದ್ಭುಜಂಗಮಸ್ಫುರದ್ಧಗದ್ಧಗ
ದ್ವಿನಿರ್ಗಮತ್ಕರಾಲ ಭಾಲಹವ್ಯವಾಟ್।
ಧಿಮಿದ್ಧಿಮಿದ್ಧಿಮಿದ್ಧ್ವನನ್ಮೃದಂಗತುಂಗಮಂಗಲ,
ಧ್ವನಿಕ್ರಮಪ್ರವರ್ತಿತ ಪ್ರಚಂಡ ತಾಂಡವಃ ಶಿವಃ ॥೧೦॥

ಯಾವನ ತಲೆಯ ಮೇಲೆ ಒಳ್ಳೇ ವೇಗದಿಂದ ತಿರುಗುವ ಹಾವಿನ ಪೂತ್ಕಾರದಿಂದ ಹಣೆಯ ಮೇಲಿನ ಭಯಂಕರವಾದ ಬೆಂಕಿಯು ಧಗಧಗನೆ ಪ್ರಜ್ವಲಿಸಿದೆಯೋ ಧಿಮಿ-ಧಿಮಿ ಧ್ವನಿ ಮಾಡುವ ಮೃದಂಗದ ಗಂಭೀರ ಮತ್ತು ಮಂಗಲ ಘೋಷದೊಂದಿಗೆ ಕ್ರಮದಿಂದ ಯಾವನು ಪ್ರಚಂಡ ತಾಂಡವ (ನೃತ್ಯ) ಮಾಡುತಲಿರುವನೋ ಆ ಭಗವಾನ್ ಶಂಕರನಿಗೆ ಜಯವಿರಲಿ.

ದೃಷದ್ವಿಚಿತ್ರ ತಲ್ಪಯೋರ್ಭುಜಂಗ ಮೌಕ್ತಿಕಸ್ರಜೋರ್ಗರಿಷ್ಠರತ್ನ
ಲೋಷ್ಠಯೋಃ ಸುಹೃದ್ವಿಪಕ್ಷಪಕ್ಷಯೋಃ।
ತೃಣಾರವಿಂದಚಕ್ಷುಷೋಃ ಪ್ರಜಾಮಹೀಮಹೇಂದ್ರಯೋಃ
ಸಮಪ್ರವೃತ್ತಿಕಃ ಕದಾ ಸದಾಶಿವಂ ಭಜಾಮ್ಯಹಮ್ ॥೧೧॥

Sri Vidyabharathi Book Centre, Sringeri

CC-0. In Public Domain. Digitized by eGangotri

ಕಲ್ಲು ಹಾಸಿಗೆ ಮತ್ತು ಪೂಸಣಲಿಪ್ತ ಹೂವು ಮತ್ತು ಮುತ್ತಿನ ಹಾರ, ಬಹುಮೂಲ್ಯ ರತ್ನ ಮತ್ತು ಮಣ್ಣು ಹೆಂಟೆ, ಮಿತ್ರ ಮತ್ತು ಶತ್ರು ಪಕ್ಷ, ಹುಲ್ಲು ಮತ್ತು ಕಮಲದಂತೆ ಕಣ್ಣುಳ್ಳ ತರುಣಿ, ಪ್ರಜಾ ಮತ್ತು ಪೃಥ್ವಿಯ ಮಹಾರಾಜ ಇವೆಲ್ಲವುಗಳಲ್ಲಿ ಸಮಾನ ಭಾವವುಳ್ಳ ನಾನು ಅದೆಂತು ಸದಾಶಿವನನ್ನು ಭಜಿಸಲಿ?

ಕದಾನಿಲಿಂಪನಿರ್ಝರೀನಿಕುಂಜ ಕೋಟರೇ ವಸನ್ ।
ವಿಮುಕ್ತ ದುರ್ಮತಿಃ ಸದಾ ಶಿರಃ ಸ್ಥಮಂಜಲಿಂ ವಹನ್ ।
ವಿಲೋಲಲೋಲಲೋಚನೋ ಲಲಾಮ ಭಾಲಲಗ್ನಕಃ ।
ಶಿವೇತಿ ಮಂತ್ರಮುಚ್ಚರನ್ ಕದಾ ಸುಖೀ ಭವಾಮ್ಯಹಮ್ ॥ ೧೨ ॥

ಸುಂದರವಾದ ಹಣೆಯುಳ್ಳ ಭಗವಾನ್ ಚಂದ್ರಶೇಖರನಲ್ಲಿ ಚಿತ್ತವನ್ನಿರಿಸಿ, ನನ್ನ ಸುವಿಚಾರಗಳನ್ನು ತ್ಯಜಿಸಿ, ಗಂಗೆಯ ದಡದಲ್ಲಿರುವ ನಿಶುಂಬದಲ್ಲಿ ವಾಸಿಸುತ್ತ ಹಣೆಗೆ ಕೈಜೋಡಿಸಿ, ನೀರು ತುಂಬಿದ ವಿಹ್ವಲವಾದ ಕಣ್ಣುಗಳಿಂದ 'ಶಿವ' ಮಂತ್ರವನ್ನುಚ್ಚರಿಸುವ ನಾನು ಅದೆಂತು ಸುಖಿಯಾದೇನು?

Sri Vidyabharathi Book Centre, Sringeri

CC-O. In Public Domain. Digitized by eGangotri

ಇಮಂ ಹಿ ನಿತ್ಯಮೇವ ಮುಕ್ತಮುತ್ತಮೋತ್ತಮಂ ಸ್ತವಂ,
ಪಠನ್‌ಸ್ಮರನ್‌ಬ್ರುವನ್ನರೋವಿಶುದ್ಧಿಮೇತಿ ಸಂತತಮ್ ।
ಹರೇಗುರೌ ಸಭಕ್ತಿಮಾಶು ಯಾತಿ ನಾನ್ಯಥಾಗತಿಂ,
ವಿಮೋಹನಂ ಹಿ ದೇಹಿನಾಂ ತುಶಂಕರಸ್ಯ ಚಿಂತನಮ್ ॥ ೧೩ ॥

ಯಾವನು ಉಕ್ತವೂ ಉತ್ತಮೋತ್ತಮವೂ ಆದ ಈ ಸ್ತೋತ್ರವನ್ನು ನಿತ್ಯವೂ ಪಠಣ, ಸ್ಮರಣೆ ಮತ್ತು ವರ್ಣನೆ ಮಾಡುವನೋ ಅವನು ಯಾವಾಗಲೂ ಶುದ್ಧನಾಗಿರುವನು ಮತ್ತು ತೀವ್ರವೇ ಸುರಗುರುವಾದ ಶ್ರೀ ಶಂಕರನ ಉತ್ತಮವಾದ ಭಕ್ತಿಯನ್ನು ಪಡೆಯುವನು. ಅವನು ವಿರುದ್ಧ ಗತಿಯನ್ನು ಹೊಂದಲಾರನು. ಯಾಕಂದರೆ ಶ್ರೀ ಶಿವನ ಉತ್ತಮವಾದ ಚಿಂತನವು ಪ್ರಾಣಿವರ್ಗದ ಮೋಹವನ್ನು ನಾಶಗೊಳಿಸುವುದಾಗಿದೆ.

ಪೂಜಾವಸಾನಸಮಯೇ ದಶವಕ್ತ್ರಗೀತಂ,
ಯಃ ಶಂಭು-ಪೂಜನಪರಂ ಪಠತಿ ಪ್ರದೋಷೆ ।
ತಸ್ಯ ಸ್ಥಿರಾಂ ರಥಗಜೇಂದ್ರತುರಂಗ ಯುಕ್ತಾಂ,
ಲಕ್ಷ್ಮೀ ಸದೈವ ಸುಮುಖೀಂ ಪ್ರದದಾತಿ ಶಂಭುಃ ॥ ೧೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಯಂಕಾಲದಲ್ಲಿ ಪೂಜೆಯನ್ನು ಮುಗಿಸಿದ ಮೇಲೆ ರಾವಣನಿಂದ ಹಾಡಲಾದ ಈ ಶಂಭು ಪೂಜನ ಸಂಬಂಧದ ಸ್ತೋತ್ರವನ್ನು ಪಠಿಸುವವನಿಗೆ ಶಂಕರನು ರಥ, ಆನೆ, ಕುದುರೆಗಳಿಂದ ಕೂಡಿದ ಯಾವಾಗಲೂ ಸ್ಥಿರವಾಗಿರುವ ಅನುಕೂಲ ಸಂಪತ್ತು ಕೊಡುವನು.

॥ ಇತಿ ಶ್ರೀ ರಾವಣ ವಿರಚಿತಂ ಶಿವತಾಂಡವ ಸ್ತೋತ್ರ ಸಂಪೂರ್ಣಮ್ ॥

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

1. ಶ್ರೀ ಗುರು ಚರಿತ್ರೆ
2. ದಾಸೋಧ
3. ಜ್ಞಾನೇಶ್ವರೀ ಗೀತೆ
4. ಪಳ್ಳಿ ರಾಮಾಯಣ
5. ಸದಾಶಿವ ಛತ್ರಪತಿ ಚರಿತ್ರೆ
6. ಸಂತಶ್ರೇಷ್ಠ ತುಕಾರಾಮ
7. ಶ್ರೀ ಗುರುವಾರ ಲಕ್ಷ್ಮೀ ವ್ರತ
8. ಉಪನಯನ ಪದ್ಧತಿ
9. ಬಗಳಾಂಬಾ ದುರ್ಗಾ ಪೂಜೆ
10. ಮಲ್ಲಾರಿ ಮಹಾತ್ಮೆ
11. ಶಿವರಾತ್ರಿ ಮಹಾತ್ಮೆ
12. ಆಸನಗಳ ಪೂಜಾ
13. ಸತ್ಯನಾರಾಯಣ ಪೂಜಾ
14. ಋಗ್ವೇದ ಸಂಧ್ಯಾವಂದನೆ
15. ಶ್ರಾದ್ಧ ಕರ್ಮ
(ಹಿರಣ್ಯ ಶ್ರಾದ್ಧ ಸಹಿತ)
16. ದೇವ ಪೂಜಾ ಪದ್ಧತಿ
(ಪುರುಷಸೂಕ್ತ ಸಹಿತ)
17. ಪಲ್ಲಕ್ಕಿ ಪೂಜಾ
18. ಷೋಡಶ ಸೋಮವಾರ ವ್ರತ
19. ಗಣಪತಿ ಪೂಜಾ ವಿಧಾನ
20. ಋಷಿ ಪಂಚಮಿ ಪೂಜಾ
21. ಸ್ವರ್ಣ ಗೌರಿ ಪೂಜಾ
22. ಜೇಷ್ಠ ಗೌರಿ ಪೂಜಾ
23. ದರಮಹಾಲಕ್ಷ್ಮೀ ಪೂಜಾ
24. ಪಳ್ಳಿ ಮಹಾತ್ಮೆ
25. ದುರ್ಗಾಲಕ್ಷ್ಮೀ ಮಹಾನವಮಿ ಪೂಜಾ
26. ಶಿವಸ್ತೋತ್ರ
27. ರಾಮರಕ್ಷಾ ಸ್ತೋತ್ರ
28. ಮಂತ್ರ ಪುಷ್ಪ
29. ವೆಂಕಟೇಶ ಸ್ತೋತ್ರ
30. ದುರ್ಗಾತ್ರಯ ಸ್ತೋತ್ರ
31. ಲಕ್ಷ್ಮೀ ಸ್ತೋತ್ರ
32. ಗಣಪತಿ ಸ್ತೋತ್ರ
33. ಸುಬ್ರಹ್ಮಣ್ಯ ಸ್ತೋತ್ರ
34. ಶನಿ ಮಹಾತ್ಮೆ
35. ದುರ್ಗಾ ಸ್ತೋತ್ರ
36. ಮಾರುತಿ ಸ್ತೋತ್ರ
37. ಅನ್ನಪೂರ್ಣಾ ಸ್ತೋತ್ರ
38. ಗಂಗಾ ಸ್ತೋತ್ರ
39. ರಾಮ ಸ್ತೋತ್ರ
40. ಸೂರ್ಯ ಸ್ತೋತ್ರ
41. ವಿಷ್ಣು ಸ್ತೋತ್ರ
42. ರಾಘವೇಂದ್ರ ಸ್ತೋತ್ರ
43. ವಾಯು ಸ್ತುತಿ
44. ದಶಾವತಾರ ಸ್ತುತಿ
45. ದ್ವಾದಶ ಸ್ತೋತ್ರ
46. ಒಗಟುಗಳು
47. ಮಂಗಲಾಷ್ಟಗಳು
48. ಮಲ್ಲಾರಿ ಅಷ್ಟೋತ್ತರ
49. ಶ್ರೀಮದ್ ಭಾಗವತ
50. ಭೈರವ ಸ್ತೋತ್ರ, ರತ್ನಾಕರ
51. ಛತ್ರಪತಿ ವಿಜಯ
52. ಪಾಂಡವ ಪ್ರತಾಪ
53. ರುಕ್ಮಿಣೀಶ ವಿಜಯ
54. ಶ್ರೀ ಕೃಷ್ಣ ಜಾರಿತ್ರ, ಮಂಜರಿ
55. ಸಂಪೂರ್ಣ ಶ್ರಾವಣಮಾಸದ ಹಾಡುಗಳು
56. ದತ್ತ ಮಹಾತ್ಮೆ
57. ಶ್ರೀ ರಾಮ
58. ಶ್ರೀ ಕೃಷ್ಣ
59. ಗುರೋಂದ್ರ ಮೋಕ್ಷ
60. ಲಲಿತಾ ಸಹಸ್ರನಾಮ

2012

ಪ್ರಕಾಶಕರು : ವೈಭವಲಕ್ಷ್ಮೀ ಪ್ರಕಾಶನ, ಸೈಕಲ್ ರೋಡ, ಮುಂಬೈ-20.

ಬೆಲೆ ರೂ.8-00

Sri Vidyabharathi Book Centre, Sringeri